# ಕರ್ನಾಟಕ ಸರ್ಕಾರ
## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.
## ಸಿ.ಸಿ.ನಂ.884/2014

**ಪಿ.ಡಬ್ಲ್ಯೂಃ 26**

**ಸಿ.ಡಬ್ಲ್ಯೂಃ 27**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಕಾಶಿನಾಥ |
| **ತಂದೆಯ ಹೆಸರು** | ಃ | ವೀರಣ್ಣಾರಾಧ್ಯ |
| **ವಯಸ್ಸು** | ಃ | 60 ವರ್ಷ |
| **ಉದ್ಯೋಗ** | ಃ | ವ್ಯವಸಾಯ |
| **ವಾಸಸ್ಥಳ** | ಃ | ದೋರನಾಳು |

**ದಿನಾಂಕಃ 08-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ**

ಈಗ್ಗೆ 7, 8 ವರ್ಷಗಳ ಹಿಂದೆ ನನ್ನ ತಂಗಿಯಾದ ಮಾಲತಿ ಜೊತೆ ಲಕ್ಕವಳ್ಳಿ ಪೋಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ನಾನು ಮಹಜರಿಗೆ ಸಹಿ ಹಾಕಿರುತ್ತೇನೆ. ಕೇಸಿನ ಬಗ್ಗೆ ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-28 ಎಂದು, ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯ್ತು.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ಆರೋಪಿಯು ಬ್ಯಾಂಕಿನಲ್ಲಿನ ಹಣವನ್ನು ದುರುಪಯೋಪಡಿಸಿಕೊಂಡು ಖಾತೆದಾರರ ಸಹಿಗಳನ್ನು ಪೋರ್ಜರಿ ಮಾಡಿದ್ದು, ಅದರ ಬಗ್ಗೆ ಪ್ರಕರಣ ದಾಖಲಾಗಿದ್ದು, ಅದಕ್ಕೆ ಸಂಬಂದಿಸಿ ಮಾಲತಿಯವರ ಮಾದರಿ ಸಹಿಯನ್ನು ಪಂಚನಾಮೆ ಜರುಗಿಸಿ ನನ್ನ ಸಹಿಯನ್ನು ಪೋಲಿಸರು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನಗೆ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.**

ಪೋಲೀಸರು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***